ಊ) ಈ ಗಲಭೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಈಗಿನ ಮಾರುಕಟ್ಟೆ ಬೆಲೆಯ ಪ್ರಕಾರವೇ ಪರಿಹಾರ ನೀಡಬೇಕೆಂದು ಯಾರಿಂದಲಾದರೂ ಒತ್ತಾಯ ಬಂದಿತ್ತೇ? ಬಂದಿದ್ದಲ್ಲಿ ಯಾರಿಂದ?

ಋ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಆ) ಹೌದು.

ಇ) ಸಂಗ್ರಹಿಸಿದ ವಿವರ

| | |
|---|---|
| ನಷ್ಟ-ವಾಹನಗಳಿಗೆ ರೂ. | 7,02,500-00 |
| ಮನೆಗಳಿಗೆ | 15,92,200-00 |
| ಹೋಟೆಲುಗಳಿಗೆ | 3,700-00 |
| ಅಂಗಡಿಗಳಿಗೆ | 22,22,394-00 |
| ದರ್ಗಾ ಮತ್ತು ಮಸೀದಿಗಳಿಗೆ | 18,000-00 |
| ಇತರೆ | 4,13,615-00 |
| ಒಟ್ಟ | 49,52,409-00 |
| ಸತ್ತವರ ಸಂಖ್ಯೆ | 3 (ಹಿಂದು-1, ಮು.2) |
| ಗಾಯಗೊಂಡವರು | |
| ಪೋಲೀಸರು | 12 |
| ಇತರರು | 4 (ಹಿಂದು 2, ಮುಸ್ಲಿಂ-2) |
| ಈ) ಆಸ್ತಿಪಾಸ್ತಿ ನಷ್ಟದ ಒಟ್ಟ | 49,52,409-00 |
| 1. ಸತ್ತವರ ಬಗ್ಗೆ | 1,50,000-00 |
| 2. ಇತರೆ | 1,85,875-00 |

ಊ) ಬಂದಿದೆ. ಭಟ್ಕಳ್ ಮಸೀಲಿಸ್ ಇಸ್ಲಾ ಓ ತನ್ಜೀರ, ಸಂಸ್ಥೆಯ ಮಹಾ ಕಾರ್ಯದರ್ಶಿಯವರಿಂದ ಮನವಿ ಬಂದಿದೆ.

ಋ) ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆ.

**ಕೊಡಗು ಜಿಲ್ಲೆಯಲ್ಲಿ ಕಳ್ಳ ಸಾಗಾಣಿಕೆ**

2656 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಹಾಗೂ ಕೇರಳ ಗಡಿಗಳಲ್ಲಿ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿರುವುದು ಹಾಗೂ ಅವ್ಯವಹಾರ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅವುಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) *1988-89, 1989-90,1990-91ನೇ ಸಾಲುಗಳಲ್ಲಿ ಈ ಗಡಿ ಪ್ರದೇಶಗಳಲ್ಲಿ ದಾಖಲು ಮಾಡಿದ ಅಕ್ರಮ ಸಾಗಾಣಿಕೆ ಪ್ರಕರಣಗಳೆಷ್ಟು? ಹಾಗೂ ಆ ಬಗ್ಗೆ ತೆಗೆದುಕೊಂಡ ಕ್ರಮವೇನು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಕೊಡಗು ಜಿಲ್ಲೆ ಹಾಗೂ ಕೇರಳ ಗಡಿಗಳಲ್ಲಿ ಮರಮಟ್ಟುಗಳ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿರುವುದು ವರದಿಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ)

| ವರ್ಷ | ನೊಂದಾಯಿಸಿದ ಪ್ರಕರಣ |
|---|---|
| 1988 | 11 |
| 1989 | 6 |
| 1990 | 8 |
| 1991 | 1 |
| (31-6-91 ರವರೆಗೆ) ಒಟ್ಟು | 26 |

ಸ್ಥಳೀಯ ಪೊಲೀಸರು ಹಾಗೂ ಅರಣ್ಯ ಘಟಕದ ಸಿಬ್ಬಂದಿ ವರ್ಗದವರು ಕಳ್ಳ ಸಾಕಾಣಿಕೆ ತಡೆಗಟ್ಟಲು ಪಹರೆ ವಿರ್ಪಡಿಸಿರುತ್ತಾರೆ. ಅದರಂತೆ ಕರ್ನಾಟಕ ರಾಜ್ಯ ರಿಜರ್ವ್ ಪೊಲೀಸನವರು ಗಡಿಗಳಲ್ಲಿ ಈ ಚಟುವಟಿಕೆಗಳನ್ನು ತಡೆಯುವ ಬಗ್ಗೆ ನಿಗಾವಹಿಸಿರುತ್ತಾರೆ.

**ಸರ್ಕಾರದ ಆಡಳಿತ ಸುಧಾರಣೆಗೆ ಕ್ರಮ.**

2648 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರದ ಆಡಳಿತ ಸುಧಾರಣೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

*ಆ) ಯಾವ ಯಾವ ಹಂತದಲ್ಲಿ ಆಡಳಿತ ಸುಧಾರಣೆ ನಡೆದಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಅನುಬಂಧದಲ್ಲಿ ಹೇಳಲಾಗಿದೆ.

ಆ) ಎಲ್ಲಾ ಹಂತಗಳಲ್ಲೂ ಸುಧಾರಣೆ ನಡೆದಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2648ಕ್ಕೆ

## ಅನುಬಂಧ

ಆಡಳಿತ ಸುಧಾರಣೆಯ ಬಗ್ಗೆ ಕೆಳಗೆ ನಮೂದಿಸಲಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಅಧಿಕಾರ ವಿಕೇಂದ್ರೀಕರಣ.
2. ಸಮಾಲೋಚನೆಗಾಗಿ ಕಳುಹಿಸುವ ಕಡತಗಳನ್ನು ಕಡಿಮೆ ಮಾಡುವುದು.
3. ಇಲಾಖಾ ಮುಖ್ಯಸ್ಥರಿಂದ ಅನಾವಶ್ಯಕವಾಗಿ ವರದಿ ಕೇಳುವುದು ಬಿಡುವುದು.
4. ಹಂತ ತಪ್ಪಿಸಿ ಕಡತ ಒಪ್ಪಿಸುವುದು.